

> ‘ಬ್ರೈಡಲ್ ಮೇಕಪ್ ಏನಾದರೂ ಮಾಡಿಕೊಳ್ಳಲಿ. ಜನರ ಕೈಕಾಲು ಹಿಡಿದು ಮದುವೇನ ಮಾಡಿಸ್ತಿರೋದು ಗೊತ್ತಾ? ಮುಖಕ್ಕೆ ಬಣ್ಣ ಬಳೀಲಿಲ್ಲಾಂತ, ಅಪ್ಪ ಒಪ್ಪಲಿಲ್ಲಾಂತ ಈ ಮದುವೆ ನಿಲ್ಲೋದು ಬೇಡ’

‘ಮೂವತ್ತು ರೂಪಾಯಿನಾ? ಇಷ್ಟಕ್ಕೆ ಬ್ರೈಡಲ್ ಮೇಕಪ್ ಯಾರು ಮಾಡ್ತಾರೆ? ಅದಕ್ಕೆ ಮುನ್ನೂರ ಅರವತ್ತು ರೂಪಾಯಿ ಬೇಕಂತ ರೋಸಿ ಕುಟ್ಟಿ ಹೇಳ್ತಾ ಇದ್ದಳು’.

‘ಏನಂದೆ, ಮುನ್ನೂರ ಅರವತ್ತು ರೂಪಾಯಿಯಾ? ಮುಖಕ್ಕೆ ಸ್ವಲ್ಪ ಬಣ್ಣ ಬಳೀಲಿಕ್ಕೆ ಅಷ್ಟೊಂದು ಹಣಾನಾ? ಅಷ್ಟೊಂದು ಹಣಾನಾ ಕೊಡ್ಲಿಕ್ಕೆ ಆಗಲ್ಲಾಂತ ರೋಸಿ ಮುಖ ನೋಡಿ ಹೇಳಿಬಿಡು. ಮುಖ ಕೆಡಿಸಲಿಕ್ಕೂ ಮುನ್ನೂರ ಅರವತ್ತು ರೂಪಾಯಿನಾ? ಇದೆಲ್ಲ ಹಚ್ಚದೇನೆ ಮದುವೆ ಆಗೋದಿಲ್ಲವೇನು ಎಂದು ನಾನು ನೋಡಿಬಿಡ್ತೀನಿ. ಇಲ್ಲಿ ಕಾಸು ಬೆಳೆಯೋ ಮರವೇನು ಇಲ್ವಲ್ಲ. ಈಗಲೇ ನಾನು ಎಲಿಂಗೋಟ್ಸ್‌ನ ದೊಡ್ಡ ತಂಬುರಾನ್‌ರಿಂದ (ರಾಜಮನೆತನಕ್ಕೆ ಸೇರಿದವರು) ಸಾಲ ಪಡೆದು ಮದುವೆ ಮಾಡಿಸ್ತಿದ್ದೀನಿ.’

ಅವರು ಕೋಪದಿಂದಲೇ ನುಡಿದರು.

‘ನೀವು ಕಾಸು ಕೊಡೋದಿಲ್ಲಾಂದ್ರೆ ನೀವೇ ಅವಳಿಗೆ ಹೇಳಿ. ನನಗಂತೂ ಅವಳು ಅಳೋದನ್ನ ನೋಡ್ಲಿಕ್ಕೆ ಆಗಲ್ಲ.’ ಆಕೆ ಹೇಳಿದರು. ಅಡುಗೆ ಸಹಾಯ ಮಾಡ್ಲಿಕ್ಕೆ ಬಂದ ಮಾರ್ತಕ್ಕನ ಬಳಿಯಲ್ಲಿಯೇ ಒಂದು ಮಣೆ ಹಾಕಿ ಕುಳಿತುಕೊಂಡರು.

‘ರೋಸಿ ಕುಟ್ಟಿಯಿಂದ ಏನು ಮಾಡಿಸಲಿಕ್ಕೂ ನನ್ನಿಂದಾಗೊಲ್ಲ. ಏನೇ ಹೇಳಿದರೂ ಒಂದೇ ಸಮನೆ ಕೂಗಾಡ್ತಾಳೆ. ನಾಲ್ಕು ದಿನ ಕಳೆದರೆ, ಅವಳು ಈ ಕುಟುಂಬದಿಂದ ದೂರವಾಗಿ ಬೇರೊಂದು ಮನೆಗೆ ಹೋಗ್ತಾಳೆ. ಅವಳು ನಮ್ಮ ಮಗಳು. ಅವಳು ಕಣ್ಣೀರನ್ನು ಹಾಕೋದು ನನಗಂತೂ ನೋಡ್ಲಿಕ್ಕೆ ಆಗಲ್ಲ.’ ರೋಸಿ ಕುಟ್ಟಿಯ ಅಮ್ಮ ಗೊಣಗಿಕೊಂಡರು.

‘ಈಗ ಏನಾಯಿತು?’ – ಮಾರ್ತಕ್ಕ ತೆಂಗಿನಕಾಯಿ ತುರಿಯುವುದರ ನಡುವೆ ಕೇಳಿದರು.

‘ರೋಸಿ ಕುಟ್ಟಿಗೆ ಕುನ್ನುಂಕುಳಂಗೆ ಹೋಗಿ ಬ್ರೈಡಲ್ ಮೇಕಪ್ ಮಾಡಿಸ್ಕೊಬೇಕಂತೆ. ಮುರಳೀಧರನ್ ಮೆನನ್ನಿನ ಮಗಳು ಮದುವೆಯಾಗುವಾಗ ಅದನ್ನ ಮಾಡಿಸಿದ್ದಳಂತೆ’ ಎಂದು ಅಮ್ಮ ಹೇಳಿದರು.

‘ಅದೇನು ಇಲ್ಲಿ ಸಿಗೋದಿಲ್ವಾ?’ ಮಾರ್ತಕ್ಕ ಕೇಳಿದರು.

ರೋಸಿ ಕುಟ್ಟಿಯ ತಾಯಿ ಮುಗುಳ್ನಕ್ಕು ಸುಮ್ಮನಾದರು.

‘ಅಲ್ಲ ಮಾರ್ತಕ್ಕ, ಅದು ಏನೂಂತ ನನಗೂ